ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೇ, ನಿಯಮಗಳಿನುಸಾರವಾಗಿ ಕ್ರಮ ತೆಗೆದುಕೊಂಡು ಹಂಚಿಕೆಯನ್ನು ಮಾಡಲಾಗಿದೆ. ಯಾವುದೇ ಲೋಪ ಇಲ್ಲದಂತೆ ಈ ಕಾರ್ಯವನ್ನು ಮಾಡಿದ್ದೇವೆ.

ಸಾತನೂರಿನಲ್ಲಿ ಕೈಗಾರಿಕಾ ಸಂಕೀರ್ಣ.

428 - ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನಕಪುರ ತಾಲ್ಲೂಕಿನ ಸಾತನೂರು ಹೋಬಳಿಯಲ್ಲಿ ಕೈಗಾರಿಕಾ ಸಂಕೀರ್ಣ ನಿರ್ಮಿಸುವ ಪ್ರಸ್ತಾವನೆ ಇದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಜೆ.ಹೆಚ್. ಪಟೀಲ್ (ಮುಖ್ಯಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಸಿ.ಎಂ. ಲಿಂಗಪ್ಪ : ಮಾನ್ಯ ಅಧ್ಯಕ್ಷರೇ, ನಕರಾತ್ಮಕವಾದ ಉತ್ತರವನ್ನು ಕೊಟ್ಟಿದ್ದಾರೆ. ಸಾತನೂರು, ಮಳವಳ್ಳಿ, ಹಾಗೂ ಕೊಳ್ಳೇಗಾಲ, ಯಳಂದೂರು ಈ ಒಂದು ಭಾಗ ಏನು ಇದೆ, ಇಲ್ಲಿ ಯಾವುದೇ ಕೈಗಾರಿಕೆಗಳ ಸ್ಥಾಪನೆ ಇಲ್ಲದೆ ಬಹಳ ವಂಚಿತವಾಗಿದೆ. ಅದರಲ್ಲೂ ಸಣ್ಣ ಕೈಗಾರಿಕೆಗಳು ಮಳವಳ್ಳಿ, ಕೊಳ್ಳೇಗಾಲ ಮಾಂಬಳ್ಳಿಯಲ್ಲಿ ಸಿಲ್ಕ್ ಫಿಲೇಚರ್‌ನ್ನು ಬಿಟ್ಟರೆ ಬೇರೆ ಏನೂ ಇಲ್ಲ. ಅದಕ್ಕಾಗಿ ನಾನು ತಮ್ಮೂಲಕ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಪ್ರಸ್ತಾಪ ಇಲ್ಲದಿದ್ದರೂ ಕೂಡ 70 ಕಿಲೋ ಮೀಟರ್ ಇರುವ ಸಾತನೂರಿನಲ್ಲೂ ಸಣ್ಣ ಕೈಗಾರಿಕೆಗಳು ಇಲ್ಲ. ಇದರ ಬಗ್ಗೆ ಮಾನ್ಯ ಸನ್ಮಾನ್ಯ ಸಚಿವರು ಇದನ್ನು ಗಮನಿಸಿ ಒಂದು ಸಕರಾತ್ಮಕವಾದ ಉತ್ತರವನ್ನಾದರೂ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎ. ಮೊಹಿದ್ದೀನ್: ಮಾನ್ಯ ಅಧ್ಯಕ್ಷರೇ, ನಮ್ಮ ಲಿಂಗಪ್ಪನವರ ಕ್ಷೇತ್ರವಾದ ಬಿಡದಿಯಲ್ಲಿ ಬಹು ದೊಡ್ಡ ಕೈಗಾರಿಕೆಗಳು ಬರುತ್ತಿವೆ. ಕಿರ್ಲೋಸ್ಕರ್, ಟೊಯೊಟಾ ಎಂದು. ಆದುದರಿಂದ ಅನಿವಾರ್ಯವಾಗಿ ಸಾತನೂರಿನಲ್ಲೂ ಕೂಡ ಕೈಗಾರಿಕೆಗಳು ಬರಬೇಕಾಗುತ್ತದೆ. ಅದರ ಪಕ್ಕದಲ್ಲೇ ಇರುವುದರಿಂದ ತಾವು ದಯವಿಟ್ಟು ತಮ್ಮ ಮಿತ್ರರಿಗೂ ಮತ್ತು ತಮಗೂ ನಾನು ತಿಳಿಸುವುದೇನೆಂದರೆ ಇದೊಂದು ಪೊಟೆನ್ಸಿಯಲ್ ಏರಿಯಾ ಆಗುತ್ತಿದೆ. ಖಂಡಿತವಾಗಿಯೂ ನಾನು ಸರ್ವೆ ಮಾಡಿಸಿ ಅಲ್ಲಿ ನಮಗೆ ಬೇಕಾದ ತಮ್ಮ ಸಹಕಾರ ಮತ್ತು ಸಾತನೂರಿನ ಶಾಸಕರಾದ ಮಾನ್ಯ ಶಿವಕುಮಾರ್‌ರವರ ಸಹಕಾರ ಇದ್ದರೆ ಖಂಡಿತವಾಗಿಯೂ ನಾವು ಅಲ್ಲಿ ಒಂದು ಕೈಗಾರಿಕಾ ಎಸ್ಟೇಟನ್ನು ಮಾಡಿ ಅಲ್ಲಿ ಜನಗಳಿಗೆ ಕೆಲಸ ಕೊಡುವ ಕೆಲಸವನ್ನು ಮಾಡುತ್ತೇನೆ.

ಅಧ್ಯಕ್ಷರು : ಮಾನ್ಯ ವೈಜನಾಥ್ ಪಾಟೀಲ್‌ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 170 (960)ಕ್ಕೂ ಸರ್ಕಾರ ಸಮಯವನ್ನು ಕೇಳಿದೆ. ಮತ್ತು ಮಾನ್ಯ ಚಂದ್ರಕಾಂತ್ ಬೆಲ್ಲದ್‌ರವರ ಪ್ರಶ್ನೆಗೂ ಸರ್ಕಾರ ಸಮಯವನ್ನು ಕೇಳಿದೆ. ಹಾಗೆ ರಾಜಶೇಖರ ಶೀಲವಂತರವರ ಪ್ರಶ್ನೆಗೂ ಸರ್ಕಾರ ಸಮಯವನ್ನು ಕೇಳಿದೆ.

ಪ್ರಧಾನ ಮಂತ್ರಿಗಳ ರೋಜಗಾರ್ ಯೋಜನೆ

174 - ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪ್ರಧಾನ ಮಂತ್ರಿಗಳ ರೋಜಗಾರ್ ಯೋಜನೆಯಲ್ಲಿ ವಿದ್ಯಾವಂತ ನಿರುದ್ಯೋಗಿಗಳಿಗೆ ಸ್ವಯಂ ಉದ್ಯೋಗ ಒದಗಿಸಲು ಪ್ರತಿ ಜಿಲ್ಲೆಗೆ ಗೊತ್ತುಪಡಿಸಿದ ಹಾಗೂ ಸಾಧಿಸಿದ ಗುರಿ ಎಷ್ಟು? (1995-96, 1996-97, 1997-98)ರ ಸಾಲುಗಳ ಜಿಲ್ಲಾವಾರು ವಿವರಗಳನ್ನು ನೀಡುವುದು?*

ಆ) *ಈ ಮೂರು ವರ್ಷಗಳಲ್ಲಿ ಪ್ರಾರಂಭಿಸಿದ ಘಟಕಗಳಲ್ಲಿ ನಡೆಯುತ್ತಿರುವ ಘಟಕಗಳೆಷ್ಟು, ಮುಚ್ಚಿರುವ ಘಟಕಗಳೆಷ್ಟು? (ಜಿಲ್ಲಾವಾರು ವಿವರಗಳನ್ನು ನೀಡುವುದು)*

ಇ) *ಆಗತ್ಯತೆಗೆ ಅನುಗುಣವಾಗಿ ಹಣಕಾಸಿನ ಸಂಸ್ಥೆಯವರು ಹಣ ಸಹಾಯ ಮಾಡದೇ ಇರುವುದರಿಂದ ಅನೇಕ ಘಟಕಗಳು ಮುಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಶ್ರೀ ಬಿ.ಎ. ಮೊಯಿದ್ದೀನ್ (ಸಣ್ಣ ಕೈಗಾರಿಕಾ ಸಚಿವರು) :

ಅ) ಪ್ರಧಾನ ಮಂತ್ರಿಗಳ ರೋಜಗಾರ್ ಯೋಜನೆಯಲ್ಲಿ ವಿದ್ಯಾವಂತ ನಿರುದ್ಯೋಗಿಗಳಿಗೆ ಸ್ವಯಂ ಉದ್ಯೋಗ ಒದಗಿಸಲು ರಾಜ್ಯಕ್ಕೆ ನಿಗಧಿಪಡಿಸಿದ ಗುರಿ ಮತ್ತು ಸಾಧನೆ ಕೆಳಕಂಡಂತಿದೆ. (ಜಿಲ್ಲಾವಾರು ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ)

ಕ್ರ.ಸಂ.	ವರ್ಷ	ಗುರಿ	ಸಾಧನೆ
1.	1995-96	17,700	17,000
2.	1996-97	17,700	17,363
3.	1997-98 (31-3-98)ಕ್ಕೆ	22,000	10,359

ಆ) ಈ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಪ್ರಾರಂಭಿಸಿದ ಘಟಕಗಳೂ ನಡೆಯುತ್ತಿರುವ ಘಟಕಗಳು ಹಾಗೂ ಮುಚ್ಚಿರುವ ಘಟಕಗಳು ವಿವರಗಳನ್ನು ಈ ಕೆಳಗೆ ನೀಡಲಾಗಿದೆ.